KATK010033472020

<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ, ತುಮಕೂರು</u>
<u>ವಿಶೇಷ ಮೊಕದ್ದಮೆ.**205/2020**</u>

ಪ್ರಾ.ಸಾ. **8**

ದೋ.ಸಾ. **12**

ದಿ.**23.06.2026**

| | |
|---|---|
| ಹೆಸರು | : ಚಂದ್ರಕಲಾ ಟಿ.ಎಸ್. |
| ಗಂಡನ ಹೆಸರು | : ಯುವರಾಜ್ |
| ವಯಸ್ಸು | : **55** ವರ್ಷ |
| ಉದ್ಯೋಗ | : ಪಿಎಸ್ಐ, ಮಹಿಳಾ ಪೋಲೀಸ್ ಠಾಣೆ |
| ವಾಸಸ್ಥಳ | : ಸಪ್ತಗಿರಿ ಬಡಾವಣೆ, ತುಮಕೂರು |

ಸಾಕ್ಷಿಯನ್ನು ಕರೆಸಿ, ಪ್ರಮಾಣವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆ ಮಾನ್ಯ ಸರ್ಕಾರಿ ಅಭಿಯೋಜಕರಿಂದ:</u>

1. ದಿ.08.04.2020 ರಿಂದ 20.05.2021 ರವರೆಗೆ ನಾನು ತುಮಕೂರು ಗ್ರಾಮಾಂತರ ಪೋಲೀಸ್ ಠಾಣೆಯಲ್ಲಿ ಪಿಎಸ್ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.
2. ದಿ.25.06.2020 ರಂದು ಸಂಜೆ 4.40 ಗಂಟೆಗೆ ಹೆಚ್ ಸಿ 439 ರಂಗಸ್ವಾಮಿಯವರ ಮುಖೇನ ಪಿಎಸ್ಐ ಲಕ್ಷ್ಮಯ್ಯನವರು ಕಳುಹಿಸಿದ ವರದಿಯನ್ನು ಸ್ವೀಕರಿಸಿ ನಮ್ಮ ಠಾಣಾ ಮೊ.ನಂ.113/2020 ರಲ್ಲಿ ಪ್ರಕರಣವನ್ನು ದಾಖಲಿಸಿ, ಪ್ರ ವ ವರದಿಯನ್ನು ನ್ಯಾಯಾಲಯಕ್ಕೂ ಮತ್ತು ಪ್ರತಿಯನ್ನು ನನ್ನ ಮೇಲಧಿಕಾರಿಗಳಿಗೆ ಸಲ್ಲಿಸಿರುತ್ತೇನೆ. ವರದಿಯನ್ನು ಈಗಾಗಲೇ ನಿಶಾನೆ ಪಿ26 ಎಂದು ಗುರುತಿಸಲಾಗಿದೆ. ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ26(ಬಿ) ಎಂದು ಗುರುತಿಸಲಾಯಿತು. ಪ್ರ ವ ವರದಿಯನ್ನು ನಿಶಾನೆ ಪಿ40 ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ40(ಎ) ಎಂದು ಗುರುತಿಸಲಾಯಿತು.
3. ಅದೇ ದಿನ ತಹಸೀಲ್ದಾರ್ ರವರಿಗೆ ಪತ್ರ ಬರೆದು ಪತ್ರಾಂಕಿತ ಅಧಿಕಾರಿಯಾದ ಅವರು ಮತ್ತು ಅವರೊಂದಿಗೆ ಇಬ್ಬರು ಸರ್ಕಾರಿ ಪಂಚರನ್ನು ಕಳುಹಿಸಿಕೊಡಲು ಮನವಿ ಸಲ್ಲಿಸಿರುತ್ತೇನೆ. ಆ ಮನವಿ ಪತ್ರವನ್ನು ನೋಡುತ್ತಿದ್ದು ಅದನ್ನು ನಿಶಾನೆ ಪಿ27 ಎಂದು

ಗುರುತಿಸಲಾಗಿದೆ. ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ27(ಬಿ) ಎಂದು ಗುರುತಿಸಲಾಯಿತು. ತಹಸೀಲ್ದಾರ್ ರವರು, ಇಬ್ಬರು ಪಂಚರಾದ ಚಂದ್ರಕಾಂತ್ ಮತ್ತು ಚೇತನ್ ಶಿವು ರವರು ಠಾಣೆಗೆ ಬಂದಿದ್ದು, ಠಾಣೆಯಿಂದ ಅಹೋಬಲ ಅಗ್ರಹಾರಕ್ಕೆ ಹೋದೆವು.

(ಈ ಹಂತದಲ್ಲಿ ಮುಂದವರೆದ ಮುಖ್ಯ ವಿಚಾರಣೆ ನೀಡಲು ಸಾಕ್ಷಿಯು ಕಾಲಾವಕಾಶ ಕೋರಿದ್ದರಿಂದ ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು).

**(**ಉಕ್ತಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಲ್ಪಟ್ಟಿತು**).**

ಓದಿ ಹೇಳಿ ಕೇ ಸರಿ ಇದೆ ಎಂದು ಒಪ್ಪಿದ್ದಾರೆ.

ಸಹಿ/-

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು